**Code No. 16 Y**

ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ

## ವಿಸ್ತರಿಸುವಿಕೆ

ಜನವರಿ, 2014

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 3 ಗಂಟೆಗಳು

ಪರಮಾವಧಿ ಅಂಕಗಳು : 100

*ಓದುವವರಿಗೆ ಸೂಚನೆಗಳು :*

1) ಕೆಳಗೆ ನೀಡಿರುವ ವಿಷಯವನ್ನು ನಿಮಿಷವೊಂದಕ್ಕೆ **300** ಅಕ್ಷರಗಳ ವೇಗದಲ್ಲಿ ಸೂಚಿಸಿದ ರೀತ್ಯಾ ಶೀಘ್ರಲಿಪಿ ಶೈಲಿಯಲ್ಲಿ ಸ್ಪಷ್ಟವಾಗಿ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿ ಟಿಪ್ಪಣಿಯನ್ನು ಸೂಕ್ತ ನಮೂನೆಯಲ್ಲಿ ವಿಸ್ತರಿಸಿ ಬರೆಯಬೇಕೆಂದು ಸೂಚಿಸತಕ್ಕದ್ದು. ಪ್ರತಿಯೊಂದು ಪ್ರಶ್ನೆಗೂ ಉತ್ತರಗಳನ್ನು ಪ್ರತ್ಯೇಕವಾದ ಹಾಳೆಯಲ್ಲಿ ಉತ್ತರಿಸಲು ವಿದ್ಯಾರ್ಥಿಗಳಿಗೆ ಸೂಚಿಸತಕ್ಕದ್ದು.
3) ಪ್ರಶ್ನೆ ಸಂಖ್ಯೆಗಳು ವೇಗದ ವಿಷಯದ ಭಾಗವಾಗಿದ್ದು, ಅವುಗಳನ್ನು ಹಾಗೂ ಪ್ರಶ್ನೆಯ ನಮೂನೆಯನ್ನು ಎತ್ತರದ ಧ್ವನಿಯಲ್ಲಿ ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಪಡಿಸಿರತಕ್ಕ ಅಂಕಗಳನ್ನು ಓದಬಾರದು. ಆದರೆ ಆ ಅಂಕಗಳನ್ನು ಉಕ್ತಲೇಖನದ ನಂತರ ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

ಪ್ರಶ್ನೆ ಒಂದು : ಸಂಪೂರ್ಣ ನೈರ್ಮಲ್ಯ
ಆಂದೋಲನ ಅನುದಾನವನ್ನು ವಿವಿಧ ಕಾಮಗಾರಿ,
ಆಡಳಿತಾತ್ಮಕ ವೆಚ್ಚ, ಪ್ರಾರಂಭಿಕ ಚಟುವಟಿಕೆ
ಮತ್ತು ಮಾಹಿತಿ, ಶಿಕ್ಷಣ ಮತ್ತು ಸಂವಹನ
$\frac{1}{4}$ ಚಟುವಟಿಕೆಗಳಿಗಾಗಿ ತೆಗೆದಿರಿಸಲಾಗಿದೆ. ಆದ/ರೆ
ಇತ್ತೀಚೆಗೆ ರಾಜ್ಯ ಮತ್ತು ಕೇಂದ್ರಾಡಳಿತ
ಪ್ರದೇಶಗಳ ಕಾರ್ಯದರ್ಶಿಗಳು ಕಚೇರಿ ಉಪಕರಣ,
ಮೊಬೈಲ್ ವಾಹನ ಖರೀದಿ, ರಾಜಕೀಯ
ಪಕ್ಷ ಮತ್ತು ಧಾರ್ಮಿಕ ಸಂಸ್ಥೆಗಳಿಗೆ
ವ್ಯಯಿಸುತ್ತಿರುವುದನ್ನು ಗಮನಿಸಲಾಗಿದ್ದು
$\frac{1}{2}$ ಇಂತ/ಹ ಅನಗತ್ಯ ಚಟುವಟಿಕೆಗಳಿಗೆ
ಬಳಸುವುದನ್ನು ಪ್ರತಿಬಂಧಿಸಲಾಗಿದೆ.

ಈ ಮೇಲ್ಕಂಡ ಅಂಶಗಳನ್ನು ಕ್ರೋಡೀಕರಿಸಿ,
ಭಾರತ ಸರ್ಕಾರದ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಸಚಿವಾಲಯ, ನವದೆಹಲಿ ಇವರ
ಸಹಿ/ಗಾಗಿ ಸರ್ಕಾರಿ ಪತ್ರ ತಯಾರಿಸಿ. $\frac{3}{4}$

(ಅಂಕಗಳು : 20)

ಪ್ರಶ್ನೆ ಎರಡು : ಬೆಂಗಳೂರು ಜಿಲ್ಲೆ,
ದೊಡ್ಡಬಳ್ಳಾಪುರ ತಾಲ್ಲೂಕಿನ ಮದುರೆ ಕೆರೆಯನ್ನು
ದುರಸ್ತಿಗೊಳಿಸುವ ಸಂಬಂಧ ಎರಡು ಸಾವಿರದ
ಹತ್ತನೇ ಇಸವಿ ಕರ್ನಾಟಕ ರಾಜ್ಯ ನೀರಾವರಿಗೆ
ಸಂಬಂXಧಪಟ್ಟ ಅಧಿನಿಯಮದ ಅರವತ್ತು(ಅ) 1
ಪ್ರಕರಣದ ಎರಡನೇ ಒಳಪ್ರಕರಣದಿಂದ ವಹಿಸಲ್ಪಟ್ಟ

[ Turn over

**ಅಧಿಕಾರವನ್ನುಪಯೋಗಿಸಿ ಮದುರೆ ಕೆರೆಯಿಂದ** ನೀರಾವರಿ ಪ್ರಯೋಜನ ಪಡೆಯುತ್ತಿರುವ
$\frac{1}{4}$ ಜಮೀನುಗಳಿಗೆ ನೀ/ರು ಹಾಯಿಸುವ ದೃಷ್ಟಿಯನ್ನು ಪರಿಗಣಿಸಿ ಸರ್ಕಾರದವರು ಸದರಿ ಅಧಿನಿಯಮದ ಮೇರೆಗೆ ಸಣ್ಣ ನೀರಾವರಿ ಯೋಜನೆ ಎಂದು ಘೋಷಿಸಿರುವ ಮದುರೆ ಕೆರೆ ದುರಸ್ತಿ ಕೆಲಸಕ್ಕೆ
$\frac{1}{2}$ ಆಗುವ ವೆಚ್ಚವು ಸಣ್ಣ ನೀರಾವರಿ ಜಲಾಶ/ಯದಿಂದ ಪ್ರಯೋಜನ ಪಡೆಯುವ ಹಿಡುವಳಿದಾರರಿಂದ ವಸೂಲು ಮಾಡಬೇಕೆಂದು ಸರ್ಕಾರವು ಘೋಷಿಸಿದೆ. ಪ್ರತಿಯನ್ನು ಮುಖ್ಯ ಇಂಜಿನಿಯರ್, ಜಿಲ್ಲಾಧಿಕಾರಿ, ರಾಜ್ಯಪತ್ರಕ್ಕೆ ಕಳುಹಿಸುವುದು.

$\frac{3}{4}$ **ಈ ಮೇಲ್ಕಂಡ ಅಂಶಗಳನ್ನು ಗರ್ಭೀಕ/ರಿಸಿ ಸರ್ಕಾರ ಸಚಿವಾಲಯದ ಲೋಕೋಪಯೋಗಿ ಇಲಾಖೆ, ಇವರಿಂದ ಘೋಷಣೆಯನ್ನು ಸಿದ್ಧಪಡಿಸಿ.**

(ಅಂಕಗಳು : 20)

**ಪ್ರಶ್ನೆ ಮೂರು :** ನಗರದ ಪುರಭವನದಲ್ಲಿ ಸಿದ್ಧಗಂಗಾ ಮಠದ ಡಾ॥ ಶಿವಕುಮಾರ ಸ್ವಾಮಿಜೀ
2 ಅವರ ನಡೆದಾಡುವ ದೇವXರು ಭಕ್ತಿಗೀತೆಗಳ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ. ಕರ್ನಾಟಕ ಪ್ರದೇಶ ಕಾಂಗ್ರೇಸ್ ಅಧ್ಯಕ್ಷರಾದ ಡಾ॥ ಜಿ. ಪರಮೇಶ್ವರ್ ಅವರಿಂದ ಉದ್ಘಾಟನೆ. ಸಮಾಜದಲ್ಲಿ ಕಲುಷಿತ
$\frac{1}{4}$ ವಾತಾವರಣ ಹೆಚ್ಚಾ/ಗುತ್ತಿದೆ. ಇಂತಹ ಸಂದರ್ಭದಲ್ಲಿ ಸ್ವಾಮೀಜಿಯವರು ಸಮಾಜ ಸುಧಾರಿಸುವ ದೀಪವಾಗಿದ್ದಾರೆ. ಸಮಾಜ ಸುಧಾರಣೆಯಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ ಎಂದು ಪ್ರಶಂಸೆ. ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಎಂ.ಪಿ. ಪ್ರಕಾಶ್, ಆಧು/ನಿಕ ಯುಗದ $\frac{1}{2}$
ಭದ್ರತೆಯಲ್ಲಿ ಸ್ವಾಮೀಜಿಯವರು ನಿಸ್ವಾರ್ಥ ಸೇವೆ ಮೈಗೂಡಿಸಿಕೊಂಡಿರುವುದು ಸ್ಫೂರ್ತಿ. ಪ್ರತಿದಿನ ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಜಾತಿಮತ ಬೇಧವಿಲ್ಲದೆ, ವಿವಿಧ ದಾಸೋಹ ನಡೆಯುತ್ತಿದೆ ಎಂದರು. ಮಠದ ಕಾ/ರ್ಯದರ್ಶಿಗಳಿಂದ $\frac{3}{4}$
ಸಿದ್ಧಗಂಗಾ ಮಠದ ಪರಿಚಯ ಮತ್ತು ವಂದನಾರ್ಪಣೆ.

**ಪತ್ರಿಕಾ ವರದಿಯನ್ನು ಸಿದ್ಧಪಡಿಸಿ.**

(ಅಂಕಗಳು : 20)

**ಪ್ರಶ್ನೆ ನಾಲ್ಕು :** ಎರಡು ಸಾವಿರದ ಹತ್ತರ ಸೆಪ್ಟೆಂಬರ್ ಇಪ್ಪತ್ತೈದರಂದು ಹಿರಿಯ ಸಾಕ್ಷ್ಯಚಿತ್ರ ನಿರ್ದೇಶಕ, ನಟ ಹಾXಗೂ ನಿರ್ದೇಶಕ ಶ್ರೀ ಎಂ.ವಿ. 3
ಕೃಷ್ಣಸ್ವಾಮಿಯವರು ಸ್ವಗೃಹದಲ್ಲಿ ನಿಧನರಾದರು. ಮೂಲತಃ ಮೈಸೂರಿನವರಾದ ದಿವಂಗತರು 'ಭಾರತಿ' ಚಿತ್ರದ ಮೂಲಕ ನಟನಾಗಿ ಪರಿಚಿತರಾದವರು. ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಖ್ಯಾತ ವೀ/ಣಾವಾದಕ ದೊರೆಸ್ವಾಮಿ ಅಯ್ಯಂಗಾರ್ $\frac{1}{4}$
ಮತ್ತು ಕುದುರೆ ಮುಖ ಕುರಿತಾದ ಸಾಕ್ಷ್ಯಚಿತ್ರಗಳ ತಯಾರಿಕೆ. ಕನ್ನಡದಲ್ಲಿ ಸುಬ್ಬಾಶಾಸ್ತ್ರಿ ಹಾಗೂ ಪಾಪಪುಣ್ಯ ಚಿತ್ರಗಳನ್ನು ನಿರ್ದೇಶನ ಮಾಡಿದ ಖ್ಯಾತಿ

1/2 ಅವರದು. ಅಲ್ಲದೆ ಭಾರತದ ಚಲ/ನಚಿತ್ರ ಅಭಿವೃದ್ಧಿ
ನಿಗಮ, ಸೆನ್ಸಾರ್ ಮಂಡಳಿ, ಚಲನಚಿತ್ರೋತ್ಸವ
ನಿರ್ದೇಶನಾಲಯ, ದೂರದರ್ಶನ ಕೇಂದ್ರಗಳಲ್ಲಿ
ಮುಖ್ಯಸ್ಥರಾಗಿ ಕೆಲಸ ಮಾಡಿದ್ದರು. ಜೀವಮಾನ
ಸಾಧನೆಗಾಗಿ ವಿ. ಶಾಂತರಾಂ ಪ್ರಶಸ್ತಿ ಹಾಗೂ
3/4 ಸಾಕ್ಷ್ಯಚಿತ್ರ ಲೋ/ಕದ ಸಾಧಕರಿಗೆ ನೀಡುವ
ಎಜ್ರಾಮೀರ್ ಪ್ರಶಸ್ತಿಯನ್ನು ಪಡೆದಿದ್ದರು.

ಶ್ರೀ ಎಂ.ವಿ. ಕೃಷ್ಣಸ್ವಾಮಿ ಅವರ ನಿಧನದ ಬಗ್ಗೆ
ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು
ಹೊರಡಿಸಿದಂತೆ ಸಂತಾಪ ಸೂಚಕ ನಿರ್ಣಯವನ್ನು
4 ತಯಾXರಿಸಿ. (ಅಂಕಗಳು : 25)

ಪ್ರಶ್ನೆ ಐದು : ಜಿಲ್ಲಾ ಪಂಚಾಯತ್ ಚುನಾವಣೆ
ಡಿಸೆಂಬರ್ ಹತ್ತೊಂಭತ್ತು ಎರಡು ಸಾವಿರದ ಹತ್ತು.
ಮತದಾನ ಕ್ಷೇತ್ರ : ಚಿಕ್ಕಮಗಳೂರು, ಸ್ಥಳ : ಸರ್ಕಾರಿ
ಮಾಧ್ಯಮಿಕ ಶಾಲೆ, ವೇಳೆ : ಬೆಳಿಗ್ಗೆ ಎಂಟರಿಂದ
1/4 ಸಾಯಂಕಾಲ ಐದರವರೆಗೆ, ಭಾ/ರತೀಯ ಪ್ರಗತಿ
ಪಕ್ಷ ಮಹಿಳಾ ಉಮೇದುವಾರರು : ಶೋಭಾಗೌಡ,
ಗುರುತು : ವಿಮಾನ, ಕುಡಿಯುವ ನೀರು, ಬೀದಿ
ದೀಪ, ಒಳಚರಂಡಿ ವ್ಯವಸ್ಥೆ, ರಸ್ತೆ ಮತ್ತು ಬಡ
ರೋಗಿಗಳಿಗೆ ಉಚಿತ ವೈದ್ಯಕೀಯ ಸೌಕರ್ಯ,
ನಿರುದ್ಯೋಗ ಸಮಸ್ಯೆ ನಿವಾ/ರಿಸುವುದು, ಪಡಿತರ 1/2
ಚೀಟಿ, ಆಹಾರ ಸಾಮುಗ್ರಿಗಳ ಬೆಲೆ ಹತೋಟಿ,
ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ : ವರ್ಗದ
ವಿದ್ಯಾರ್ಥಿ : ವಿದ್ಯಾರ್ಥಿನಿಯರಿಗೆ ಉಚಿತ
ಹಾಸ್ಟೆಲ್‌ಗಳ ನಿರ್ಮಾಣ, ಎಂಟನೇ ತರಗತಿಯ
ವಿದ್ಯಾರ್ಥಿಗಳಿಗೆ ಉಚಿ/ತ ಬೈಸಿಕಲ್ ಇತ್ಯಾದಿ 3/4
ಅನೇಕ ಸೌಲಭ್ಯಗಳನ್ನು ಒದಗಿಸಲು
ಶ್ರಮಿಸುವವರಿದ್ದಾರೆ.

ಈ ಮೇಲ್ಕಂಡ ಅಂಶಗಳನ್ನು ಕ್ರೋಡೀಕರಿಸಿ
ಮತದಾರರಲ್ಲಿ ಅಭ್ಯರ್ಥಿಯ ಪರವಾಗಿ ಚುನಾವಣಾ
ಪ್ರಣಾಳಿಕೆಯನ್ನು ತಯಾರಿಸಿ.X 5

(ಅಂಕಗಳು : 15)